ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 1069/2021

ಸಿ ಡಬ್ಲ್ಯೂ-3
ಪಿ ಡಬ್ಲ್ಯೂ- 3

ದಿಃ 07-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಮಹೇಶ್ ಆನಂದು ನಾಯಕ |
| ತಂದೆಯ ಹೆಸರುಃ | ಆನಂದು ನಾಯಕ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಗೌಂಡಿ ಕೆಲಸ |
| ವಿಳಾಸಃ | ಹಟ್ಟಿಕೇರಿ, ಅವರ್ಸಾ |

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಚಾಸಾ-2 ರವರ ಪರಿಚಯ ಇರುತ್ತದೆ. ದಿ 31-07-2021 ರಂದು ಹಾರವಾಡ ಕ್ರಾಸ್ ಹತ್ತಿರ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ಚಾಸಾ-2 ಹಾಗೂ ಸುಮಾರು ಜನರು ಇದ್ದರು. ಘಟನಾ ಸ್ಥಳದ ಜಾಗವನ್ನು ಪೊಲೀಸರು ತೋರಿಸಿರುತ್ತಾರೆ. ಬೆಳ್ಳಿಗೆ ಸುಮಾರು 07.00 ರಿಂದ 08.30 ಸಮಯ ತನಕ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ವಾಹನದ ಫೋಟೊಗಳನ್ನು ತೆಗೆದಿದ್ದು, ಸಹಿಗಳನ್ನು ಮಾಡಿರುತ್ತೇನೆ. ನಿಶಾನೆ ಪಿ2 ರ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಶಾನೆ ಪಿ2 ಎಂದು ಗುರುತಿಸುತ್ತಾರೆ. ನಿಪಿ4 ರಿಂದ 7 ಫೋಟೊಗಳನ್ನು ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿಯೆಂದು ಪರಿಟಣೆಸಿದ್ದು, ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿಸಲಾಯಿತು.)

ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದ

ನಿಪಿ3 ನಕಾಶೆಯನ್ನು ನನ್ನ ಸಮಕ್ಷಮ ತಯಾರಿಸಿರುತ್ತಾರೆ. ನಾನು ಸಹಿಯನ್ನು ಹಾಕಿ ಬದಿಯಲ್ಲಿ ನಿಂತಿರುತ್ತೇನೆ. ನಿಪಿ3 ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಪಿ3 ಸಿ ಎಂದು ಗುರುತಿಸಲಾಯಿತು. ನಕಾಶೆಯನ್ನು ನನ್ನ ಮುಂದೆಯೇ ತಯಾರಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರಪರ ವಕೀಲರಾದ ಶ್ರೀ. ವಿ.ವಿ.ಎಸ್.ರವರಿಂದ

ಹಾರವಾಡ ಕ್ರಾಸ್‌ನಿಂದ ಹಟ್ಟಿಕೇರಿ ಸುಮಾರು 1 ಕಿ.ಮಿ. ಆಗುತ್ತದೆ. ನಾನು ಪಂಚನಾಮೆಗೆ ಹೋದಾಗ ಸುಮಾರು ಬೆಳ್ಳಿಗೆ 08.10 ಘಂಟೆ ಆಗಿರುತ್ತದೆ. ನಾನು ಬೈಕ್ ನಲ್ಲಿ ಹೋಗಿರುತ್ತೇನೆ. ಸ್ಥಳದಲ್ಲಿ ಸುಮಾರು 100 ಜನ ಇರುತ್ತಾರೆ. ನಕಾಶೆಯನ್ನು ಪೆನ್ನಿನಿಂದ ಬಿಡಿಸಿರಬಹುದು. ನಾನು ಅಪಘಾತವಾದ ಸ್ಥಳವನ್ನು ತೋರಿಸಿರುತ್ತೇನೆ. ನಾನು ಅಪಘಾತವಾದ ಸ್ಥಳವು ಇದೇ ಇರುತ್ತದೆ ಎಂದು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ. ಅಪಘಾತವು ಸುಮಾರು ಸಂಜೆ 06.30 ಸಮಯದಲ್ಲಿ ಆಗಿರಬಹುದು. ಆ ಸಮಯದಲ್ಲಿ ಮಳೆಯು ಬರುತ್ತಿರಲಿಲ್ಲ. ಯಾವ ಪೊಲೀಸರಿಗೆ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಜೊತೆ ಕೆಲಸ ಮಾಡುವವರು ಸಹ ನನ್ನ ಜೊತೆ ಹಾಜರಿದ್ದರು. ಅವರ ಹೆಸರು ಸಂದೀಪ್ ನಾಗೇಶ್ ನಾಯಕ, ಪ್ರಶಾಂತ್ ವಾಮನ್ ನಾಯಕ ಮತ್ತು ಪ್ರಶಾಂತ್ ಆಗೇರ್ ಇರುತ್ತಾರೆ. ಇವರೆಲ್ಲರೂ ಅಪಘಾತವನ್ನು ನೋಡಿರುತ್ತಾರೆ ಎಂದು ಪೊಲೀಸರಿಗೆ ಹೇಳಿರುತ್ತೇನೆ. ಬೈಕನ್ನು ಯಾರು ಚಲಾಯಿಸುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಅಪಘಾತವಾದ ಸಮಯದಲ್ಲಿ ಹೆಲ್ಮೆಟ್ ಹಾಗೂ ಬ್ಯಾಗ್ ಇರುತ್ತದೆ. ಬೈಕ್, ಹೆಲೆಟ್ ಹಾಗೂ ಬ್ಯಾಗನ್ನು ಅಂಕೋಲಾ ಪೊಲೀಸ್ ಠಾಣೆಗೆ ಗಾಡಿಯಲ್ಲಿ ಹಾಕಿ ಕಳುಹಿಸಿದ್ದೇವು. ಸುಮಾರು ಸಂಜೆ 07.30 ಘಂಟೆಗೆ ಹಾಕಿರುತ್ತೇವೆ. ಎನ್.ಸಿ.ಸಿ. ಅವರ ಡಂಪರ್ ಮೇಲೆ ಹಾಕಿ ಕಳುಹಿಸಿರುತ್ತೇವೆ. ಮರುದಿನ ಪಂಚನಾಮೆಯನ್ನು ಮಾಡಿದ್ದೇವೆ ಎನ್ನುವ ಸಮಯದಲ್ಲಿ ಹೆಲ್ಮೆಟ್ ಇರಲಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಇದೇ ರೀತಿ ಬರೆಯಿರಿ ಎಂದು ನಾನಾಗಲಿ ಅಥವಾ ಬೇರೆಯವರಾಗಲಿ ಹೇಳಿರುವುದಿಲ್ಲ ಪೊಲೀಸರೆ ಬರೆದಿರುತ್ತಾರೆ. ಫೋಟೊಗಳನ್ನು ಅಪಘಾತವಾದ ಬಗ್ಗೆ ತೆಗೆದಿರುತ್ತಾರೆ. ನಕಾಶೆಯನ್ನು ಸಹ ಪೊಲೀಸರೆ ಬರೆದಿದ್ದು, ನಾನಾಗಲಿ ಅಥವಾ ಬೇರೆಯವರಾಗಲಿ ಹೇಳಿರುವುದಿಲ್ಲ. ನನಗೆ ಬೈಕ್ ಓಡಿಸಿ ಅಭ್ಯಾಸ ಇರುತ್ತದೆ. STOP ಅಂತ ಬರೆದಿರುವ ರಸ್ತಯು ಅಗಲ ಇರುತ್ತದೆ ಎಂದರೆ ಸರಿ. ಅದರ ಹಿಂದುಗಡೆಗೆ ಯು ಟರ್ನ್ ಅಂತ ಬಲಕ್ಕೆ ತಿರುವಿನ ಗುರುತು ಇರುತ್ತದೆ ಎಂದರೆ ಸರಿ. ಅಲ್ಲಿ ಬೇರೆ ವಾಹನವನ್ನು ಓವರ್ ಟೇಕ್ ಮಾಡಬಾರದು ಎಂದರೆ ಸರಿ. ಇದರ ವಿಷಯವಾಗಿ ನಾನು ಪೊಲೀಸರಿಗೆ ಹೇಳಿರುವುದಿಲ್ಲ. ನನಗೆ ಪಂಚನಾಮೆಯಲ್ಲಿ ಏನು ಬರೆದಿರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನನಗೆ ಪೊಲೀಸರ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಎನ್.ಸಿ.ಸಿ. ಇವರಾು ಟಿಪ್ಪರ್ ಗಳಿಗೆ ಬೇರೆ ಊರುಗಳಿಂದ ಚಾಲಕ ಹಾಗೂ ಕ್ಲಿನರ್ ಗಳನ್ನು ಕರೆದುಕೊಂಡು ಬರುತ್ತಾರೆ ಎಂದರೆ ಸರಿ. ಹಾಗಾಗಿ ನಾನು ಸ್ಥಳಿಯರಿಗೆ ಉದ್ಯೋಗದಲ್ಲಿ ಅವಕಾಶ ಕೊಡಬೇಕೆಂದು ಪ್ರಯತ್ನಿಸುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪಂಚನಾಮೆಯನ್ನು ಮಾಡಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಹೋಗಿದ್ದಾಗಲ್ಲಿ ಯಾವುದೇ ಅಪಘಾತವನ್ನು ನೋಡಿದ್ದಾಗಲ್ಲಿ ಅಥವಾ ನಕಾಶೆಯನ್ನು ತಯಾರಿಸಿದ್ದಾಗಲಿ ಹಾಗೂ ಸಹಿಯನ್ನು ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಎನ್.ಸಿ.ಸಿ. ಇವರ ಮೇಲಿನ ದ್ವೇಷದಿಂದ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.